ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಅಭಿಯಂತರರು (ರ.ಮೂ.ಸೌ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಎನ್.ಆರ್. ಚೌಕ
ಬೆಂಗಳೂರು, ದಿ:04.07.2011

ತಾಂತ್ರಿಕ ಮಂಜೂರಾತಿ

ವಿಷಯ: "Improvement To Drain And Footpath in Devinagar Near RMV Apartment"ಗೆ ಕಾಮಗಾರಿಯ ಅಂದಾಜುಪಟ್ಟಿಗೆ ತಾಂತ್ರಿಕ ಮಂಜೂರಾತಿ ನೀಡುವ ಬಗ್ಗೆ.

ಉಲ್ಲೇಖ:– ಈ ಕಛೇರಿ ಆಡಳಿತಾತ್ಮಕ ಮಂಜೂರಾತಿ ಸಂ:CE(MR)/TA/ADM/66/2011-12, ದಿ:04.07.2011

>>>***<<<

ಪ್ರಸ್ತಾವನೆ:–

ಮೇಲ್ಕಂಡ ಕಾಮಗಾರಿಯ ಅಂದಾಜುಪಟ್ಟಿಯನ್ನು ರೂ.17,30,000/=(ರೂಪಾಯಿ ಅದಿನೇಳು ಲಕ್ಷದ ಮೂವತ್ತು ಸಾವಿರಗಳು ಮಾತ್ರ)ಗಳ ಮೊತ್ತಕ್ಕೆ 2010–11 ನೇ ಸಾಲಿನ ದರಪಟ್ಟಿಯ ದರಗಳಂತೆ ತಯಾರಿಸಿ ಸಲ್ಲಿಸಿರುತ್ತಾರೆ. ಸದರಿ ಕಾಮಗಾರಿಗೆ ಉಲ್ಲೇಖಿತ ಪತ್ರದಲ್ಲಿ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗಿರುತ್ತದೆ.

ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, 2010–11ನೇ ಸಾಲಿನ ದರಪಟ್ಟಿಯ ದರಗಳಂತೆ ತಯಾರಿಸಿರುವ, ಕಾಮಗಾರಿಯ ಅಂದಾಜುಪಟ್ಟಿಯ ಮೊತ್ತ ರೂ.17,30,000/=(ರೂಪಾಯಿ ಅದಿನೇಳು ಲಕ್ಷದ ಮೂವತ್ತು ಸಾವಿರಗಳು ಮಾತ್ರ)ಗಳಿಗೆ ಈ ಪತ್ರದಲ್ಲಿ ಕಾಣಿಸಲಾದಂತಹ ತಾಂತ್ರಿಕ ನಿಬಂಧನೆಗಳಿಗೆ ಒಳಪಟ್ಟಂತೆ ತಾಂತ್ರಿಕ ಮಂಜೂರಾತಿ ನೀಡಲಾಗಿದೆ. ಈ ತಾಂತ್ರಿಕ ಮಂಜೂರಾತಿಯನ್ನು, ಮುಖ್ಯ ಅಭಿಯಂತರರವರ ದಾಖಲುಪಟ್ಟಿ ಸಂ:CE(MR)/TS/66/2011-12 ಎಂದು ಪರಿಗಣಿಸತಕ್ಕದ್ದು.ಫ

ತಾಂತ್ರಿಕ ನಿಬಂಧನೆಗಳು:–

1) ಟೆಂಡರ್‌ನ ಒಟ್ಟು ಮೊತ್ತ ರೂ.10,000/–ಕ್ಕಿಂತ ಜಾಸ್ತಿ ಇದ್ದರೆ ಟೆಂಡರ್ ಆಹ್ವಾನಿಸಬೇಕು.
2) ಅಂದಾಜಿನಲ್ಲಿ ಅಳವಡಿಸಿರುವ ಮಾರುಕಟ್ಟೆ ದರಗಳಿಗೆ ಹಾಗೂ ದರಪಟ್ಟಿಯಲ್ಲಿ ದರ ಲಭ್ಯವಿಲ್ಲದ ಬಾಬ್ತುಗಳಿಗೆ ಮೂಲಾಧಾರಿತ ದರ ಹಾಗೂ ಕೊಟೇಷನ್‌ಗಳನ್ನು ತಯಾರಿಸಿ, ಸಕ್ಷಮ ಅಧಿಕಾರಿಗಳಿಂದ ಅನುಮೋದನೆ ಪಡೆಯತಕ್ಕದ್ದು.
3) ಅಂದಾಜಿನಲ್ಲಿ ಪರಿಮಾಣಗಳನ್ನು ಮತ್ತು ದರಗಳನ್ನು ಮತ್ತೊಮ್ಮೆ ಪರಿಶೀಲಿಸಿಕೊಳ್ಳತಕ್ಕದ್ದು.
4) ಈ ಹಿಂದೆ ತಾಂತ್ರಿಕ ಮಂಜೂರಾತಿ ಅನುಮೋದನೆ ನೀಡಲಾದ ಅಂದಾಜುಗಳಲ್ಲಿನ ಬಾಬ್ತುಗಳು ಮತ್ತು ಬಾಬ್ತುಗಳ ಪರಿಮಾಣಗಳು ಈ ಅಂದಾಜುಗಳಲ್ಲಿ ಮರುಕಳಿಸದಿರುವುದಕ್ಕೆ ಪರಿಶೀಲಿಸಿ, ದೃಢೀಕರಿಸಿಕೊಂಡ ನಂತರವೇ ಈ ಕಾಮಗಾರಿಗಳನ್ನು ಕೈಗೊಳ್ಳುವಲ್ಲಿ ಸೂಕ್ತ ಕ್ರಮ ಅನುಸರಿಸತಕ್ಕದ್ದು.

5) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ಪ್ರಕಾರ ಕಾಮಗಾರಿಯ ಟೆಂಡರ್ ಕರೆಯುವಲ್ಲಿ ಸೂಕ್ತ ಕ್ರಮ ಅನುಸರಿಸತಕ್ಕದ್ದು.
6) ಅಂದಾಜುಪಟ್ಟಿಯ ಮೊತ್ತವು ಮಂಜೂರಾತಿಯಾದ ಮೊತ್ತಕ್ಕಿಂತ ಮೀರಿರಬಾರದು.
7) ಮೇಲಿನ ಕಾಮಗಾರಿಯನ್ನು ನಿಖರವಾದ ಐ.ಆರ್.ಸಿ ಮಾರ್ಗಸೂಚಿಯ ಪ್ರಕಾರ ನಿರ್ವಹಿಸಬೇಕಾಗಿರುತ್ತದೆ.
8) ಕೆಲಸ ಪ್ರಾರಂಭಿಸುವ ಮುನ್ನ ಕಾಮಗಾರಿ ನಡೆಯುವ ಸ್ಥಳವು ವಿವಾದಗಳಿಂದ ಮುಕ್ತವಾಗಿದೆಯೆಂದು ಪರಿಶೀಲಿಸತಕ್ಕದ್ದು.
9) ಕಾಮಗಾರಿಗೆ ಮಂಜೂರಾದ ಮೊತ್ತದ ಹಣವನ್ನು ಅದೇ ಕಾಮಗಾರಿಗೆ ಉಪಯೋಗಿಸತಕ್ಕದ್ದು.
10) ಕಾಮಗಾರಿಯನ್ನು ಮೌಲ್ಯ ಪ್ರಮಾಣ ವಿವರಣೆಯ (Standard Specification) ಪ್ರಕಾರ ನಿರ್ವಹಿಸತಕ್ಕದ್ದು.
11) ಕಾಮಗಾರಿ ಪೂರ್ಣಗೊಂಡ ನಂತರ. ನಿಗಧಿತ ಅವಧಿಯೊಳಗೆ ಯುಟಿಲೈಜ಼ೇಷನ್ ಪ್ರಮಾಣ ಪತ್ರ ಹಾಗೂ ಕಾಮಗಾರಿ ಪೂರ್ಣಗೊಂಡ ಪ್ರಮಾಣ ಪತ್ರಗಳನ್ನು ಸಲ್ಲಿಸತಕ್ಕದ್ದು.
12) ಕರಾರಿನಲ್ಲಿರುವಂತೆ ವೆಚ್ಚವನ್ನು ನಿರ್ಬಂಧಿಸತಕ್ಕದ್ದು.
13) ಮಂಜೂರಾದ ಕಾಮಗಾರಿಯಲ್ಲಿ ಯಾವುದೇ ಬದಲಾವಣೆ ಅಥವಾ ಮಾರ್ಪಾಡು ಆಗಿದ್ದಲ್ಲಿ ಅನುಷ್ಠಾನ ಅಧಿಕಾರಿಗಳೇ ಜವಾಬ್ದಾರರಾಗಿರುತ್ತಾರೆ.
14) ಇಡುಗಂಟ್ಟು ಅಳವಡಿಕೆಯಲ್ಲಿ ಇರುವ ಮೊತ್ತಕ್ಕೆ ವಿಸ್ತಾರವಾಗಿ ತಯಾರಿಸಿ ಅನುಮೋದನೆಯನ್ನು ಪಡೆಯತಕ್ಕದ್ದು.
15) ಪ್ರಮಾಣೀಕರಿಸಿದ ಸಾಗಾಣಿಕೆ ಪಟ್ಟಿ ಹಾಗೂ ನಿಯೋಜಿತ ವಿಲೇವಾರಿ ಸ್ಥಳಗಳಿಗೆ ಅನುಮೋದನೆಯನ್ನು ಪಡೆಯತಕ್ಕದ್ದು.

ಮುಖ್ಯ ಅಭಿಯಂತರರು (ರ.ಮೂ.ಸೌ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಪ್ರತಿಯನ್ನು,

1. ಕಾ.ಪಾ.ಅ (ರಮೂಸೌ– ಟಿ.ಇ.ಸಿ) ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಲಾಗಿದೆ.